ಸಿ.ಸಿ..ನಂ.203/2024

ಪಿ.ಡಬ್ಲ್ಯೂ-2

ದಿನಾಂಕ.03-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ** **ಆರೋಪಿ ಪರ ಶ್ರೀ ಜಿ.ಎನ್ ಎನ್ ವಕೀಲರಿಂದಃ**

1. ಅರೋಪಿಯು ಯಾವಾಗ ಸಾಲ ತೆಗೆದುಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುತ್ತದೆ . ಈ ಪ್ರಕರಣವನ್ನು ದಾಖಲು ಮಾಡುವಾಗ ನಮ್ಮ ಸಂಸ್ಥೆ ಯ ವಸೂಲಾಧಿಕಾರಿಯಾದ ಸುಭಾಷ ಶ್ರೀನಿವಾಸ ನಾಯಕ ರವರು ಇದ್ದರು . ಆರೊಪಿಯು ದಿಃ17-6-2017 ರಂದು ತೆಗೆದಿರುತ್ತಾರೆ . ದಿಃ17-6-2017 ರಂದು ನಾನು ಬ್ಯಾಂಕ ನಲ್ಲಿ ಇದ್ದೆ . ಷದ್ರಿ ಆರೋಪಿಯು ಸಾಲ ವನ್ನು ತೆಗೆದುಕೊಂಡಿದ್ದರ ಬಗ್ಗೆ ಮತ್ತು ಸಾಲದ ಅರ್ಜಿ ಸಲ್ಲಿಸಿದ್ದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುತ್ತದೆ . ಸಾಲದ ಅರ್ಜಿಯನ್ನು ಆರೋಪಿಯು ಯಾವ ದಿನಾಕದಂದು ಕೊಟ್ಟಿರುತ್ತಾರೆ ಎಂದು ಈಗ ನನಗೆ ನಿರ್ದಿಷ್ಟ ದಿನಾಂಕ ನೆನಪಿಲ್ಲ . ಸಾಲಕ್ಕೆ ಜಾಮಿನುದಾರರಾಗಿ ಲತಿಫಾಬಿ ಅಬ್ದುಲ್ಲಾ ಶೇಖ ಮತ್ತು ಮಂಜರ ಹುಸೇನ ಸೈಯದ ರವರ ಜಾಮಿನನ್ನು ಪಡೆದು ಕೊಂಡಿರುತ್ತೇವೆ . ಮಂಜರ ಹುಸೇನ ರವರ ಮೇಲೆ ಸಹ ನೀವು ನಿಮ್ಮ ಸಂಸ್ಥೆಯಿಂದ ಒಂದು ಚೆಕೆ ಬೌನ್ಸ ಪ್ರಕರಣವನ್ನು ಮಾಡಿರುತ್ತಿರಿ ಎಂದರೆ ಸರಿ . ಅದು ಈ ಸಾಲಕ್ಕೆ ಸಂಭಂಧಿಸಿದ್ದು ಎಂದರೆ ಸರಿ . ಮಂಜರ ಹುಸೇನ ರವರ ಮೇಲೆ ರೂ 2,60,000 ಗೆ ಚೆಕ್ ಬೌನ್ಸ ಪ್ರಕರಣ ದಾಖಲಿಸಲಾಗಿರುತ್ತದೆ .

2. ಮಂಜರ ಹುಸೇನ ರವರ ಚೆಕ ನಲ್ಲಿ ಕಾಣಿಸಿದ ರೂ 2,60,000 ಹಣ ನಿಮ್ಮ ಸಂಸ್ಥೆಯ balance sheet ನಲ್ಲಿ ಇರಲಿಲ್ಲ ಎಂದರೆ ಸುಳ್ಳು . ಆ ಪ್ರಕರಣದಲ್ಲಿ ಮಂಜರ ಹುಸೇನ ರವರಿಗೆ ಶಿಕ್ಷೆಯಾಗಿರುತ್ತದೆ. ಈ ಚೆಕ ಬೌನ್ಸ ಪ್ರಕರಣದಲ್ಲಿ ಅರೋಪಿಯು ನಮ್ಮ ಸಂಸ್ಥೆಗೆ ರೂ 2,24,000 ಹಣ ತುಂಬಿರುತ್ತಾರೆ . ಈ ಪ್ರಕರಣದಲ್ಲಿ ಉಳಿದ ರೂ 55,000 ಹಣ ವನ್ನು ಆರೋಪಿ ಕೊಟ್ಟರೆ ಸಾಲದ ಹಣವು ಮುಕ್ತಾಯವಾಗುತ್ತದೆ ಎಂದರೆ ಚೆಕ್ ಹಣ ಮುಕ್ತಾಯವಾಗುತ್ತದೆ . ಈ ಸಾಲದ ಅಕೌಂಟ ಗೆ ಸಂಬಂಧಿಸಿದಂತೆ ಇವತ್ತಿನ ವರೆಗೆ ಎಷ್ಟು ಹಣ balance ಇರುತ್ತದೆ ಎಂದರೆ ಹೇಳಲಾಗುವುದಿಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.